C.Misc. 392/2021
PW-1

Date : 16/10/2024

ಸಾಕ್ಷಿಯನ್ನು ಕರೆಸಿ ಪ್ರಮಾಣ ವಚನ ಬೋಧಿಸಲಾಯಿತು.

**– ಮುಖ್ಯ ವಿಚಾರಣೆ – ಶ್ರೀ ಆರ್.ಬಿ. ವಕೀಲರಿಂದ –**

ನಾನು ಈ ಕೇಸಿನಲ್ಲಿ ಅರ್ಜಿದಾರನಿರುತ್ತೇನೆ. ನನ್ನ ಮುಖ್ಯ ಸಾಕ್ಷ್ಯದ ಪ್ರಮಾಣ ಪತ್ರವನ್ನು ಸಲ್ಲಿಸಿದ್ದು, ಅದರಲ್ಲಿ ಬರೆದಿರುವ ಎಲ್ಲಾ ಅಂಶಗಳನ್ನು ನಾನೇ ಹೇಳಿ ಬರೆಸಿದ್ದು, ಅವು ಸತ್ಯವಾಗಿರುತ್ತವೆ ಹಾಗೂ ಅದರಲ್ಲಿರುವ ಸಹಿ ನನ್ನದಾಗಿರುತ್ತದೆ.

ಅರ್ಜಿ ಮತ್ತು ಸಾಕ್ಷ್ಯಕ್ಕೆ ಪೂರಕವಾಗಿ, ಪಹಣಿ ಪತ್ರಿಕೆ ಮತ್ತು ಪರಿಷ್ಕೃತ ಮಾರುಕಟ್ಟೆ ಬೆಲೆ ಪಟ್ಟಿಗಳನ್ನು ಹಾಜರುಪಡಿಸಿದ್ದು , ಅವುಗಳನ್ನು ನಿಪಿ–1 ಮತ್ತು ನಿಪಿ–2 ಎಂದು ಗುರುತಿಸಲಾಯಿತು.

**– ಪಾಟೀ ಸವಾಲು –**

**ಈ ಹಂತದಲ್ಲಿ ವಕೀಲರ ಕೋರಿಕೆ ಮೇರೆಗೆ ಪಾಟೀ ಸವಾಲನ್ನು ಮುಂದೂಡಲಾಯಿತು.**

(ತೆರೆದ ನ್ಯಾಯಾಲಯದಲ್ಲಿ ಸಾಕ್ಷಿಯ ಹೇಳಿಕೆಯನ್ನು ನನ್ನ ಉಕ್ತಲೇಖನದಂತೆ ಬೆರಳಚ್ಚುಪಡಿಸಿದೆ)

ಓದಿ ಹೇಳಿ ಕೇಳಿ ಸರಿ ಇದೆ.

1 ನೇ ಅಪರ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರು,
ಚಿತ್ರದುರ್ಗ.

ದಿನಾಂಕ 22/11/2024 ರಂದು ಸಾಕ್ಷಿಯನ್ನು ಪುನಃ ಕರೆಸಿ ಪ್ರಮಾಣ ವಚನ ಬೋಧಿಸಲಾಯಿತು.

**– ಪಾಟೀ ಸವಾಲು – ಶ್ರೀ K.H.S. ವಕೀಲರಿಂದ –**

ಎದುರುದಾರರು ಜಮೀನಿನಲ್ಲಿ ಲೈನು ಎಳೆಯುವ ಕಾಲಕ್ಕೆ ಬೆಳೆ ನಷ್ಟ ಪರಿಹಾರವಾಗಿ ರೂ.2,58,722/– ಕೊಟ್ಟಿರುತ್ತಾರೆ ಎಂದರೆ ಸರಿ. ಆಗ ಬೋರ್ ವೆಲ್ ಗೆ ನಷ್ಟ ಉಂಟಾದ ಬಗ್ಗೆ 95 ಸಾವಿರ ರೂ ಪರಿಹಾರ ಕೊಟ್ಟಿದ್ದಾರೆ ಎಂದರೆ ಸರಿ. ಟವರ್ ಹಾಕಿರುವ ಬಗ್ಗೆ ರೂ.1,03,500/– ಕೊಟ್ಟಿದ್ದಾರೆ ಎಂದರೆ ಸರಿ ಆದರೆ ಸದರ್ ಪರಿಹಾರಗಳು ಕಡಿಮೆ ಆಗಿರುತ್ತವೆ.

ಲೈನು ಎಳೆದ ಬಗ್ಗೆ ಭೂಮಿ ಅಪಮೌಲ್ಯ ಆದ ಬಗ್ಗೆ ರೂ.5,89,170/– ಗಳನ್ನು ಕೊಟ್ಟಿದ್ದಾರೆ ಎಂದರೆ ಸರಿಯಲ್ಲ ಆದರೆ ಅದು ಬೆಳೆ ಪರಿಹಾರವೆಂದು ಕೊಟ್ಟಿರುತ್ತಾರೆ. ಹೆಚ್ಚಿನ ನಷ್ಟ ಉಂಟಾದ ಬಗ್ಗೆ ನಾನು ಯಾವುದೇ ಇಲಾಖಾ ಅಧಿಕಾರಿಗಳನ್ನು ಕರೆಯಿಸಿ ವರದಿ ಮಾಡಿಸಿರುವುದಿಲ್ಲ. ಅರ್ಜಿ ಮತ್ತು

ಮುಖ್ಯ ಸಾಕ್ಷ್ಯದ ಮಾಗಣೆಗಳಿಗೆ ಪೂರಕವಾಗಿ ಯಾವುದೇ ದಾಖಲೆಗಳನ್ನು ಹಾಜರುಪಡಿಸಿಲ್ಲ ಎಂದರೆ ಸರಿಯಲ್ಲ. ಎದುರುದಾರರು ಕೊಟ್ಟಿರುವ ಪರಿಹಾರವು ಅಂತಿಮ ಮತ್ತು ಸರಿಯಾದ ಪರಿಹಾರ ಎಂದರೆ ಸರಿಯಲ್ಲ.

ನಾನು ಎದುರುದಾರರಿಂದ ಸೂಕ್ತ ಪರಿಹಾರದ ಹಣ ಪಡೆದಿದ್ದರೂ ಕೂಡ, ಇನ್ನೂ ಹೆಚ್ಚಿನ ಹಣ ಪಡೆಯುವ ದುರುದ್ದೇಶದಿಂದ ಸುಳ್ಳು ಪ್ರಕರಣ ಹಾಕಿ, ಸುಳ್ಳು ದಾಖಲೆಗಳನ್ನು ಹಾಕಿ, ಸುಳ್ಳು ಪ್ರಮಾಣ ಪತ್ರವನ್ನು ಸಲ್ಲಿಸಿ , ಸುಳ್ಳು ಸಾಕ್ಷ್ಯವನ್ನು ಹೇಳುತ್ತಿದ್ದೇನೆ ಅನ್ನುವುದು ಸರಿಯಲ್ಲ.

ಮರು ವಿಚಾರಣೆ – ಇಲ್ಲ.

(ತೆರೆದ ನ್ಯಾಯಾಲಯದಲ್ಲಿ ಸಾಕ್ಷಿಯ ಹೇಳಿಕೆಯನ್ನು ನನ್ನ ಉಕ್ತಲೇಖನದಂತೆ ಬೆರಳಚ್ಚುಪಡಿಸಿದೆ)

ಓದಿ ಹೇಳಿ ಕೇಳಿ ಸರಿ ಇದೆ.

1 ನೇ ಅಪರ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರು,
ಚಿತ್ರದುರ್ಗ.